ಧೈರ್ಯವೆಲ್ಲಾ ಇಳಿದು ಹೋಯಿತು. ಅಧಿಕಾರಿ ಅನಗತ್ಯ ತನ್ನ ಮೇಲೆ ಆರೋಪ ಹೊರಿಸುತ್ತಿದ್ದಾನೆ. ಲಹರಿ ತನ್ನ ಒಡಹುಟ್ಟಿದವಳು ಅವಳ ಕಣ್ಮರೆಯಿಂದ ಇಡೀ ಕುಟುಂಬ ತತ್ತರಿಸಿ ಹೋಗಿದೆ. ಅವಳು ಕಾಣೆಯಾಗಿ ನಾಲ್ಕೈದು ತಿಂಗಳು ಮೇಲಾದರೂ ಇನ್ನೂ ಅವಳ ಬಗ್ಗೆ ಯಾವುದೇ ಕುರುಹು ದೊರಕದಿರುವುದು ಇನ್ನಷ್ಟು ಭಯ, ಆತಂಕಗಳಿಗೆಡೆ ಮಾಡಿದೆ. ಇವನ್ನೆಲ್ಲಾ ಅಧಿಕಾರಿಗೆ ಹೇಗೆ ತಿಳಿಸುವುದು? ಅಧಿಕಾರಿ ಬಂಗಲೆಗೆ ಬರುವಾಗ ಅವನ ಜೊತೆಗೆ ಸರಿಯಾಗಿ ಮಾತನಾಡಿಲ್ಲವೆಂದು ಅವನು ಈ ರೀತಿಯಾಗಿ ಹೇಳುತ್ತಿರುವನೆ?

ಕೈಚೀಲದೊಳಗಿದ್ದ ಅನಾಮಧೇಯ ಪತ್ರವನ್ನು ತೆಗೆದು ಅಧಿಕಾರಿಯತ್ತ ಚಾಚಿದಳು ಮೇನಕಾ.

'ಇದೇ ಆ ಪತ್ರ. ನೋಡಿ. ಅಕ್ಷರಗಳೂ ಅಸ್ಪಷ್ಟ ಕನ್ನಡದಲ್ಲಿವೆ. ಜೊತೆಗೆ ಭಾಷೆಯೂ ಅಸ್ಪಷವಾಗಿದೆ'

ಅಧಿಕಾರಿ ಪತ್ರವನ್ನು ತೆಗೆದುಕೊಂಡು ನೋಡಿದ. ಅಕ್ಷರಗಳು ವಿಚಿತ್ರವಾಗಿದ್ದರೂ ಓದಲು ಅಡ್ಡಿಯಿಲ್ಲ. ಪತ್ರದಲ್ಲಿ ತಿಳಿಸಿರುವಂತೆ ಹಳೇಯ ಕಟ್ಟಡವೆಂದರೆ ಅದು ಪಾಂಬುವೇ ಬರೆದಿರುವ ಪತ್ರ ಅನಿಸುತ್ತಿದ್ದೆ. ಹಿಂದಿನ ದಿನ ಆತನನ್ನು ಹಿಂಬಾಲಿಸಿಕೊಂಡು ಹೋದಾಗ ಆತ ಹಳೇಯ ಕಟ್ಟಡದ ಒಳಗಿನಿಂದ ಹೊರಗೆ ಬರುತ್ತಿದ್ದ. ಜೊತೆಗೆ ಅವನ ಜೊತೆಗೆ ಆರಡಿ ಎತ್ತರದ ವ್ಯಕ್ತಿಯಿದ್ದ! ಹಾಗಾದರೆ ಆ ಇಬ್ಬರಲ್ಲಿ ಯಾರೋ ಒಬ್ಬ ಅನಾಮಧೇಯ ಪತ್ರವನ್ನು ಬರೆದಿದ್ದಾನೆ? ಯಾರಾತ?

'ಮೇಡಂ, ನೀವು ಈ ಪತ್ರದ ವಿಷಯನ್ನು ತಿಳಿಸಿದ್ದು ಒಳ್ಳೆಯದ್ದೇ ಆಯಿತು. ಇದರಿಂದ ನಾವು ಸಕಾಲದಲ್ಲಿ ಲಹರಿಯನ್ನು ಹುಡುಕಬಹುದು'

'ಅಂದ್ರೆ, ಇದರಿಂದ ಲಹರಿಯನ್ನು ಪತ್ತೆ ಹಚ್ಚಲು ನೆರವಾದೀತೆ?'

'ಖಂಡಿತವಾಗಿಯೂ ಲಹರಿಯನ್ನು ಪತ್ತೆ ಮಾಡುವುದಕ್ಕೆ ಇದು ಸಹಾಯವಾಗುತ್ತೆ. ಈಗಾಗಲೇ ಕೆಲವು ವ್ಯಕ್ತಿಗಳನ್ನು ನಾವು ಸಂದೇಹಿಸಿದ್ದೇವೆ. ಈ ಪತ್ರವನ್ನು ಅವರ ಜೊತೆಗೆ ತಾಳೆ ಮಾಡಿ ನೋಡಿದರೆ ಖಂಡಿತವಾಗಿಯೂ ಅವಳ ಕಣ್ಮರೆಯ ಹಿಂದಿರುವ ವ್ಯಕ್ತಿಗಳನ್ನು ನಾವು ಹಿಡಿಯಬಹುದು'.

'ಸಾರ್, ಹಾಗಾದ್ರೆ ಲಹರಿ ಜೀವಂತವಾಗಿದ್ದಾಳಲ್ಲವೆ?'

ಮೇನಕಾಳ ದೂರಾಲೋಚನೆಯ ಪ್ರಶ್ನೆ ಮೂಡಿದಾಗಲೇ ಇನ್ಸ್‌ಪೆಕ್ಟರ್‌ಗೆ ಅನುಮಾನ ಕಾಡಿತು. ಅವಳಿಂದ ಯಾಕಾಗಿ ಈ ತರಹದ ಪ್ರಶ್ನೆ ಮೂಡಿತೋ ಅನಿಸಿತು. ಹಾಗಾಗಿ ಅಧಿಕಾರಿಗೆ ಅವಳ ಮತ್ತು ಲಹರಿಯ ಸಂಬಂಧ ಹೇಗಿತ್ತೆಂದು ತಿಳಿದುಕೊಳ್ಳುವ ಅನಿವಾರ್ಯತೆ ಮೂಡಿತು. ಅದನ್ನು ನೇರವಾಗಿ ಮೇನಕಾಳನ್ನು ಕೇಳಿದರೆ ಯಾವುದೇ ಪ್ರಯೋಜನವಿಲ್ಲವೆನ್ನುವುದು ಗೊತ್ತು. ಆದ್ದರಿಂದ ಆ ಪ್ರಶ್ನೆಯನ್ನು ಮಾಡದೆ ಸುಮ್ಮನಾದ.

'ಮೇನಕಾ, ನಿಮ್ಮ ಲಹರಿಗೆ ಪ್ರಾಣಾಪಾಯವಾಗುವ ಯಾವ ಸಾಧ್ಯತೆಗಳು ಕೂಡ ಇಲ್ಲ. ಈವರೆಗಿನ ನಮ್ಮ ತನಿಖೆಯಿಂದ ಆಕೆ ತನ್ನ ಪ್ರಿಯಕರನ ಜೊತೆಗೆ ಹೋಗಿದ್ದಾಳೆ ಅಥವಾ ಅವಳನ್ನು ಪ್ರೀತಿಸೋ ಹುಡುಗ ಒತ್ತೆಯಾಳಾಗಿ ಇಟ್ಟುಕೊಂಡಿದ್ದಾನೆ'

'ಅಂದ್ರೆ, ಅವಳನ್ನು ಪ್ರೀತಿಸ್ತಿದ್ದ ಹುಡುಗ ಯಾರೂಂತ ನಿಮಗೆ ಗೊತ್ತೆ?'

'ಆ ಪ್ರಶ್ನೆನಾ ನಾನು ನಿಮಗೆ ಕೇಳ್ಬೇಕು. ಎಷ್ಟೆಂದರೂ ಆಕೆ ನಿಮ್ಮ ತಂಗಿಯಲ್ಲವೆ?' ಅಧಿಕಾರಿ ಮುಗುಳ್ನಗುತ್ತಲೇ ಆ ಪ್ರಶ್ನೆಯನ್ನು ಕೇಳಿದಾಗ ಮೇನಕಾ ಒಮ್ಮೆ ಉಗುಳು ನುಂಗಿಕೊಂಡಳು.

ಇನ್ಸ್‌ಪೆಕ್ಟರ್ ರಾಜಧಾನಿಯ ಮೇನಕಾಳ ಮುಖದಲ್ಲಾಗುತ್ತಿದ್ದ ಸೂಕ್ಷ್ಮ ಬದಲಾವಣೆಯನ್ನು ಗಮನಿಸುತ್ತಿದ್ದ. ಇದರಿಂದ ಅವರಿಬ್ಬರ ಸಂಬಂಧ ಹೇಗಿತ್ತು ಅನ್ನುವುದನ್ನು ಕೂಡ ತಿಳಿಯಬೇಕಾಗಿತ್ತು.

'ಸಾರ್, ಒಂದಂತು ನಿಜ. ಅವಳು ಪದೇ ಪದೇ ಮರಳು ದಿಣ್ಣೆಗೆ ಹೋಗ್ತಾ ಇದ್ಲು. ಅಲ್ಲಿ ಯಾವ್ನ ಜೊತೆಗೋ ಓಡಾಡ್ತಿದ್ಲು ಅನ್ನೋದು ಎಲ್ಲರಿಗೂ ಗೊತ್ತಿರೋ ವಿಚಾರ. ಅದೇನೋ ನಾಡ ದೋಣಿಯಲ್ಲಿ ಅವರಿಬ್ಬರೂ ಸೇರಿಕೊಂಡು ಸಂಜೆವರೆಗೂ ವಿಹಾರ ನಡೆಸಿದ್ರೂ ಅನ್ನೋದು ಗೊತ್ತು. ಆದ್ರೆ ಅವ್ನು ಯಾರು ಅನ್ನೋದು ಮಾತ್ರ ಗೊತ್ತಿಲ್ಲ. ನಮ್ಮ ಕಾರಿನ ಡ್ರೈವರ್ ಶೇಖರ ಯಾವಾಗ್ಲೂ ಅವರ ಬಗ್ಗೆ ಮಾತಾಡ್ತಾ ಇರ್ತಿದ್ದ. ಅವ್ನು ನಮ್ಮ ತಂದೆಯ ನಂಬಿಗಸ್ತ ಆಳು' ಮೇನಕಾ ಮಾತು ಮುಗಿಸಿ ಇನ್ಸ್‌ಪೆಕ್ಟರ್‌ನತ್ತ ನೋಡಿದಳು. ಅಧಿಕಾರಿ ಎಲ್ಲವನ್ನೂ ತನ್ನ ಮೆದುಳಿನಲ್ಲಿ ದಾಖಲಿಸುತ್ತಿದ್ದ.

'ಹಾಗಾದ್ರೆ ನಿಮ್ಮ ಡ್ರೈವರ್‌ನನ್ನು ವಿಚಾರಿಸಿದ್ರೆ ಆ ಹುಡುಗನ ಬಗ್ಗೆ ತಿಳಿಬಹುದಲ್ವೆ?'

'ಖಂಡಿತವಾಗಿಯೂ, ಅವಳೂನೂ ಆ ಹುಡುಗನ ಬಗ್ಗೆ ಏನನ್ನೂ ಹೇಳ್ತಾ ಇರ್ಲಿಲ್ಲ. ಹಾಗಾಗಿ ನಾವ್ಯಾರೂ ಅವಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಅಲ್ಲದೆ ಅವಳು ಈ ತರಹ ಮನೆ ಬಿಟ್ಟು ಹೋಗ್ತಾಳೇಂತೆ ನಾವು ಅಂದುಕೊಂಡಿರಲಿಲ್ಲ'

ಮೇನಕಾಳ ಮಾತಿನಲ್ಲಿ ನೋವಿರಲಿಲ್ಲ. ಮಾರ್ಮಿಕವಾಗಿತ್ತು ಮಾತು. ಇವನ್ನೆಲ್ಲಾ ಇನ್ಸ್‌ಪೆಕ್ಟರ್ ಗಮನಿಸಿದ.

'ಈಗ ನೀವು ಈ ಪತ್ರಕ್ಕೆ ಸ್ಪಂದಿಸುವಂತೆ ಆ ವ್ಯಕ್ತಿಯನ್ನು ಕಾಣುವುದಕ್ಕೆ ಹೊರಟದ್ದೀರಲ್ಲವೆ? ನೀವು ಆ ವ್ಯಕ್ತಿಗೆ ಹಣವನ್ನು ಕೊಟ್ಟು ವಿಷಯ ತಿಳಿಯುವ ಇಚ್ಛೆಯಿಂದ ಹೊಟಿದ್ದೇ?'

'ಅಲ್ಲ, ಆ ವ್ಯಕ್ತಿ ಯಾರೆನ್ನುವ ಕುತೂಹಲದಿಂದ ಹೊರಟಿದ್ದೆ'

'ಅಂದ್ರೆ, ಅಪಾಯಾನ ಎದುರಿಸೋಕೆ ನಿರ್ಧರಿಸಿರೋ ಹಾಗಿತ್ತಲ್ಲವೆ?'

'ಅಪಾಯ?! ಯಾಕೆ?' ಬಾಲೀಶವಾದ ಪ್ರಶ್ನೆ ಹಾಕಿದಳು.

'ಯಾರೋ ಅಪರಿಚಿತ ವ್ಯಕ್ತಿ ಈ ರೀತಿ ಅನಾಮಧೇಯ ಪತ್ರ ಬರೆದು ನಿಮ್ಮನ್ನು ಕರೆಸಿ ನಿಮಗೆ ಸತ್ಕಾರ ಮಾಡುತ್ತಾನೆನ್ನುವ ದೃಷ್ಟಿಯಿಂದ ಅಲ್ಲಿಗೆ ಹೋಗುವುದಕ್ಕೆ ನಿರ್ಧರಿಸಿದ್ರಾ, ನೀವು?'

ತನ್ನ ಆತುರದ ನಿರ್ಧಾರಕ್ಕೆ ಅವಳಿಗೆ ನಾಚಿಕೆಯಾಯಿತು. ಇನ್ಸ್‌ಪೆಕ್ಟರ್ ಹೇಳುತ್ತಿರುವುದು ಸತ್ಯ. ತನ್ನ ಬುದ್ಧಿಗೆಲ್ಲಿ ಮಂಕು ಬಡಿದಿತ್ತು? ಯಾವುದೋ ಅನಾಮಧೇಯ ಪತ್ರಕ್ಕೆ ಸ್ಪಂದಿಸಿ ಹೊರಟಿರುವುದು ಎಲ್ಲಿಗೆ? ಬುದ್ಧಿಭ್ರಮಣೆ ಯಾದಂತೆ ತಾನು ಆ ಹಳೇಯ ಕಟ್ಟಡದ ಅಖಾಡಕ್ಕೆ ಇಳಿಯುತ್ತಿದ್ದರೆ ಲಹರಿಯಂತೆ ತಾನೂ ಕಣ್ಮರೆಯಾಗುತ್ತಿದ್ದೆನೇನೋ? ಸಕಾಲದಲ್ಲಿ ಇನ್ಸ್‌ಪೆಕ್ಟರ್



## ಇಲ್ಲಿಯವರೆಗೆ

ಲಹರಿ ಕಳೆದು ಹೋಗಿದ್ದಕ್ಕೆ ಚಡಪಡಿಸುತ್ತಾ ಹಿತೇಶ ಮರಳುದಂಡೆಯ ಮೇಲೆ ಅತ್ತಿಂದಿತ್ತ ಹೆಜ್ಜೆ ಹಾಕುತ್ತಾನೆ. ಆಗ ಯುವಕನೊಬ್ಬ 'ಕಳೆದುಹೋದ ಹುಡುಗಿ, ನೀನು ಪ್ರೀತಿಸಿದ ಹುಡುಗಿಯನ್ನು ಹುಡುಕಿ ಕೊಡುವಂತೆ ಪೊಲೀಸ್ ಕಂಪ್ಲೇಂಟ್ ಕೊಟ್ಟು ಆರಾಮವಾಗಿರುವುದು ಬಿಟ್ಟು ಮರಳುದಂಡೆಯ ಮೇಲೆ ಕನವರಿಸುತ್ತಾ ಕೂರುವುದರಿಂದ ಏನು ಪ್ರಯೋಜನ?' ಎಂದು ಕೇಳುತ್ತಾನೆ. ಒಬ್ಬಂಟಿಯಾಗಿ ಅಡ್ಡಾಡಬೇಡ ಎಂಬ ಮಾತನ್ನು ಮುತ್ತುಚಾಂಡಿ ಕೂಡ ಹಿತೇಶನಿಗೆ ಹೇಳುತ್ತಾನೆ. ಇದೇ ಮಾತನ್ನು ಅಪರಿಚಿತ ಯುವಕನೂ ನುಡಿದಿರುವುದು ನೋಡಿ ಹಿತೇಶನಿಗೆ ಆಶ್ಚರ್ಯವಾಗುತ್ತದೆ. ಅಲ್ಲದೆ ಕೆಲವು ದಿನಗಳಿಂದ ಪಾಂಬು ದೋಣಿ ಯನ್ನು ನೀರಿಗಿಳಿಸಿರಲಿಲ್ಲ. ಇದಕ್ಕೆ ಕಾರಣ ತಿಳಿಯುವ ಕುತೂಹಲ, ಆಸಕ್ತಿಯು ಕೂಡ ಹಿತೇಶನಿಗಿರಲಿಲ್ಲ.

ಈ ಮಧ್ಯೆ ಲಹರಿಯ ಬಗ್ಗೆ ಹಿತೇಶ ವಿಪರೀತ ತಲೆಕೆಡಿಸಿಕೊಂಡಿರು ವುದನ್ನು ಮುತ್ತುಚಾಂಡಿ ಕಾಕುಟ್ಟನಿಗೆ ಹೇಳುತ್ತಾನೆ. ಲಹರಿ ಬಗ್ಗೆ ನಿನಗೇನು ಗೊತ್ತು ಎಂದು ಕಾಕುಟ್ಟ ಅನಿರೀಕ್ಷಿತ ಪ್ರಶ್ನೆ ಕೇಳಿದಾಗ ಬೆಚ್ಚಿಬೀಳುತ್ತಾನೆ ಮುತ್ತುಚಾಂಡಿ. ಕಾರಿನಲ್ಲಿ ಬಂದ ಮೇನಕಾಗೆ ಈಗ ಒಬ್ಬನ ಸಹಾಯ ಬೇಕಾಗಿತ್ತು. ಅದನ್ನು ಕಿರಣನಿಂದ ನಿರೀಕ್ಷಿಸುತ್ತಾಳೆ ಮೇನಕಾ.